ಹೇಳುವುದಿಲ್ಲ. ಎಲ್ಲಾ ಜನ ತೊಂದರೆ ಪಡುತ್ತಿದ್ದಾರೆ. ಆದರೆ ಈ ತಂಗಳಭದ್ರಾ ಎಡದಂಡೆ ಸಮಸ್ಯೆ ಯನ್ನು ಸರ್ಕಾರ ಪರಿಹಾರ ಮಾಡಲು ಸುಮಾರು ೫೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೂರು ವರ್ಷಗಳಲ್ಲಿ ಮುಗಿಸಿಕೊಡಬೇಕೆನ್ನುವ ಯೋಚನೆ ಇದೆ. ಸರ್ಕಾರದವರು ಕೆಲಸ ಮಾಡಲು ಈಗಾಗಲೇ ಆದೇಶವನ್ನು ಸಹ ಕೊಟ್ಟಾಗಿದೆ. ಜೂನ್ ತಿಂಗಳಲ್ಲಿ ಈ ಕೆಲಸಕ್ಕೆಂದು ಸುಮಾರು ೩ ಕೋಟಿ ರೂಪಾಯಿಗಳ ಹಣವನ್ನು ಒದಗಿಸಿಕೊಟ್ಟಿದ್ದೇವೆ ಎಲ್ಲೆಲ್ಲಿ ಏನೇನು ಕೆಲಸ ಕಾರ್ಯಗಳನ್ನು ಕೈಗೊಳ ಬೇಕೋ ಆ ಎಲ್ಲಾ ಕೆಲಸ ಕಾರ್ಯಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಡ್ರೈಲ್ಯಾಂಡ್‌ಗೆ ನೀರು ಪುಶ್ ಮಾಡಬೇಕಾದರೆ ಬಹಳ ಕಷ್ಟ ಇದೆ. ಅಲ್ಲಿನ ಕೆಪ್ಯಾಸಿಟಿ ಆಂದಾಜಂ ಬಹಳ ಕಡಿಮೆ ಇದೆ ಪವರ್ ಯಾವಾಗಲೂ ಲೋಡಿಂಗ್ ಇರುವುದಿಲ್ಲ. ಆದರಿಂದ ನಮಗೆ ಬಹಳ ಕಷ್ಟವಾಗುತ್ತದೆ. ಈ ವಿಷಯವನ್ನು ರೈತ ಪ್ರತಿನಿಧಿಗಳು ಸಹ ಬಂದು ನನ್ನೊಡನೆ ಚರ್ಚೆ ಮಾಡಿದ್ದಾರೆ. ಅವರಿಗೂ ಕೂಡ ನಾನು ಈ ವಿಷಯ ವನ್ನು ತಿಳಿಸಿದ್ದೇನೆ, ಈಗಾಗಲೇ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ

ಶ್ರೀ ಎಫ್. ಎ. ಕೊಪ್ಪದ,—ಸ್ವಾಮಿ ಡ್ರೈಲ್ಯಾಂಡ್‌ಗೆ ಸ್ವಲ್ಪ ಪುಶ್ ಮಾಡಿದರೆ ನೀರು ಬರುತ್ತ ದೆಂದು ನಾನು ಕೇಳಿದ್ದೇನೆ. ಆದ್ದರಿಂದ ದಯಮಾಡಿ ಆ ಕೆಲಸವನ್ನು ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಇಲಾಖಾಧಿಕಾರಿಗಳಿಂ ಆ ಸ್ಥಳವನ್ನು ಸುಮಾರು ೫-೬ ಸಾರಿ ಪರಿಶೀಲನೆ ಮಾಡಿದ್ದಾರೆ ನಾನು ಮೊದಲೇ ಹೇಳಿದಂತೆ ಸುಮಾರು ೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೂರು ವರ್ಷಗಳಲ್ಲಿ ಮುಗಿಸಂವುದಕ್ಕೆ ಪ್ರಯತ್ನ ಮಾಡುತ್ತೇವೆ.

ಸೂಳ್ಯ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬ-ಕಲ್ಲುಗುಡ್ಡೆ ಸೂಜಿಪಾಲ ರಸ್ತೆ ಸಂಪರ್ಕ ಕುರಿತಂ.

೯೬೩. ಶ್ರೀ ಬಾಕೀಲ ಹುಕ್ರಪ್ಪ (ಸೂಳ್ಯ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೂಳ್ಯ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬದಿಂದ ಕಲ್ಲುಗುಡ್ಡೆ ಸೂಜಿಪಾಳಲಿಕ್ಕೆಗೆ ಹೋಗುವ ರಸ್ತೆ ಮತ್ತು ಸೇತುವೆಗಳ ಕಾಮಗಾರಿಗಳು ಇನ್ನು ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ. (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಸೂಜಿ ಬಲ್ಲಾಲಕ್ಕೆ ಒಂದು ಕೂಡು ರಸ್ತೆ ಕಾಮಗಾರಿಯು ನಡೆಯುತ್ತಾ ಇದ್ದು ಅದನ್ನು ೧೯೮೪-೮೫ರಲ್ಲಿ ಪೂರ್ಣಗೊಳಿಸಂತೆ ನಿರೀಕ್ಷೆ ಇದೆ. ಹಾಗೂ ಈ ರಸ್ತೆಯಲ್ಲಿ ೨.೭೮ ಲಕ್ಷ ರೂ. ವೆಚ್ಚದಲ್ಲಿ ಒಂದು ಸೇತುವೆ ನಿರ್ಮಾಣವಾಗಬೇಕಾಗಿದ್ದು ಗುತ್ತಿಗೆದಾರರು ಕೆಲಸವನ್ನು ಭಾಗಶ: ಮಾಡಿ (ರೂ. ೧.೧೮ ಲಕ್ಷ) ನಿಲ್ಲಿಸಿದ್ದರಿಂದ ಬೇರೆ ಗುತ್ತಿಗೆದಾರರನ್ನು ಗೊತ್ತುಪಡಿಸಿ ಈ ಕಾಮಗಾರಿಯನ್ನು ತ್ವರಿತ ವಾಗಿ ಪೂರ್ಣಗೊಳಿಸಲು ಯೋಗ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಪಿ. ರಾಂದೇವ್.—ಸ್ವಾಮಿ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಎಷ್ಟು ವರ್ಷಗಳಲ್ಲಿ ಈ ಕೆಲಸವನ್ನು ಪೂರ್ತಿ ಮಾಡುತ್ತೀರಿ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ ಕೆಲಸ ೧೯೮೦ರಲ್ಲಿ ಶುರುವಾಗಿದೆ. ಅಲ್ಲಿ ಸುಮಾರು ೧.೧೮ ಸಾವಿರ ರೂಪಾಯಿಗಳ ಕೆಲಸ ಮಾಡಿದ್ದಾರೆ. ಆದಷ್ಟು ಬೇಗ ಕೆಲಸ ಮಾಡಿ ಮುಗಿ ಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ ರಾಂದೇವ್.—ಸ್ವಾಮಿ ಕೆಲಸ ಡಿಲೇ ಆಗಿದೆಯೆಂದು ನಿಮ್ಮ ಗಮನಕ್ಕೆ ಬಂದಿದೆಯಾ?

ಶ್ರೀ ಹೆಚ್.ಡಿ. ದೇವೇಗೌಡ,—ಸ್ವಾಮಿ ಡಿಲೇ ಆಗಿದ್ದಕ್ಕೆ ನಾವು ಜವಾಬ್ದಾರರಲ್ಲ, ಎಷ್ಟು ವೇಗವಾಗಿ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಆಷ್ಟು ವೇಗವಾಗಿ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಲಿಂಗನಗೌಡ ಪಾಟೀಲ್‌ರವರಿಗೆ ಉತ್ತರ ಹೇಳುತ್ತಾ ಎಲ್ಲಾ ವಿವರಗಳನ್ನು ಹೇಳಿದ್ದೇನೆ. ಈ ಬಗ್ಗೆ ನಾನು ಈಗ ಏನೂ ಹೇಳುವುದಕ್ಕೆ ಆಗುವುದಿಲ್ಲ.